ಮೈಸೂರಿನ ಸುಬ್ಬರಾಯನ ಕೆರೆಯಂಲ್ಲಿ ಸಂಕೀರ್ಣ ನಿರ್ಮಿಸುವುದು

೧೬೬೯. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಪುರದ ಮಾದರಿಯಲ್ಲೇ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯ ಕೇಂದ್ರವಾದ ಮೈಸೂರಿನ ಸರ್ಕಾರದವರು ಸುಬ್ಬರಾಯನ ಕೆರೆ ಮೈದಾನದಲ್ಲಿ ಉಪಯೋಕ್ತ "ಷಹೀದ್" ಸಂಕೀರ್ಣವನ್ನು ನಿರ್ಮಿಸಲು ಕ್ರಮ ಕೈಗೊಳ್ಳುವರೇ ?

ಆ) ಸೂಚಿತ ಸಂಕೀರ್ಣ ನಿರ್ಮಾಣದ ರೂಪ ರೇಷಗಳನ್ನು ರಚಿಸಲು ಎಂಜಿನಿಯರಿಂಗ್ ತಜ್ಞರ ಸಮಿತಿಯೊಂದನ್ನು ರಚಿಸುವ ಆಲೋಚನೆ ಇದೆಯೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಮೈಸೂರು ಮಹಾನಗರ ಪಾಲಿಕೆಯು ಕ್ರಮ ತೆಗೆದುಕೊಳ್ಳುತ್ತಿದೆ.

ಆ) ಹೌದು.

ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಸುವುದು

೨೨೩೧. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಗ್ರಾಮಾಭಿವೃದ್ಧಿ, ಪಂಚಾಯತ್‌ರಾಜ್, ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಅವಧಿಯು ಕೆಲವು ಜಿಲ್ಲೆಗಳಲ್ಲಿ ಮುಂಕಾಯ್ದಾಯವಾಗಿದ್ದರೂ ಚುನಾವಣೆ ನಡೆಸದೆ ಇರಲು ಕಾರಣಗಳೇನು ?

ಆ) ಸರ್ಕಾರವು ಕಾನೂನು ತೊಡಕುಗಳು ಇಲ್ಲದಿದ್ದಲ್ಲಿ, ಚುನಾವಣೆ ನಡೆಸಲು ಇರುವ ಇತರ ತೊಂದರೆಗಳೇನು, ಹಾಗಿಲ್ಲದಿದ್ದಲ್ಲಿ ಅಧ್ಯಕ್ಷರನ್ನು ಹಾಗೂ ಉಪಾಧ್ಯಕ್ಷರನ್ನು ಒಪ್ಪಂದದ ಮೇಲೆ ಮುಂದುವರಿಸಲಾಗುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ರಾಜ್ಯದ ಎಲ್ಲಾ ಜಿಲ್ಲಾ ಪರಿಷತ್ತುಗಳಲ್ಲಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಅವಧಿಯು ಮುಂಗಿಯದೆ ಇರುವುದರಿಂದ ಚುನಾವಣೆ ನಡೆಸುವ ಪ್ರಶ್ನೆ ಉದ್ಭವಿಸುವುದಿಲ್ಲ.

'ಅ"ನಲ್ಲಿ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.